**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 27.05.2021.**

**1] ತಾಳಿಕೋಟಿ ಪೊಲೀಸ ಠಾಣೆ ಗುನ್ನಾ. ನಂ: 95/2021 ಕಲಂ: 279. 337. 304(ಎ) ಐ.ಪಿ.ಸಿ.**

ದಿನಾಂಕ: 26.05.2021 ರಂದು 09.30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ರಮಜಾನ ಹನೀಪ ಮಕನದಾರ ಸಾ॥ ಫತ್ತೇಪೂರ. ತಾ॥ ತಾಳಿಕೋಟಿ. ಕಾರ ನಂ: ಕೆಎ:28. ಝಡ್:0962 ನೇದರ ಚಾಲಕ. ಈತನು ಕಾರ ನಂ: ಕೆಎ:28. ಝಡ್:0962 ನೇದರಲ್ಲಿ ತನ್ನ ಪಕ್ಕದಲ್ಲಿ ನಾಗು ಅಣ್ಣಪ್ಪ ತೋಟದ ಇವನಿಗೆ ಮತ್ತು ಕಾರ ಹಿಂದಿನ ಸೀಟದಲ್ಲಿ ಪ್ರಭುಗೌಡ ಭೀಮನಗೌಡ ನಾಗರಾಳ @ ಬಿರಾದಾರ. ವಯಾ– 24 ವರ್ಷ. ಸಾ॥ ಫತ್ತೇಪೂರ ತಾ॥ ತಾಳಿಕೋಟಿ ಇವನಿಗೆ ಕೂಡಿಸಿಕೊಂಡು ಕಾರಗನೂರ ಗ್ರಾಮಕ್ಕೆ ಹೋಗಿ ಕಾರ ಮಾಲಿಕರಿಗೆ ಔಷದ ಹಣ್ಣು ಕೊಟ್ಟು ಮರಳಿ ಫತ್ತೇಪೂರಕ್ಕೆ ಬರುವಾಗ ತಾನು ನಡಿಸುವ ಕಾರನ್ನು ಜೋರಾಗಿ ಅಜಾಗೂರುಕತೆಯಿಂದ ಮಾನವಿಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡಿಸಿಕೊಂಡು ಹೋಗುವಾಗ ತುಂಬಗಿ ಗ್ರಾಮದ ಭರಮಣ್ಣ ವಡ್ಡರ ಇವರ ಹೊಲದ ಹತ್ತಿರ ಆಯಾ ತಪ್ಪಿ ರಸ್ತೆ ಎಡಗಡೆ ತಗ್ಗಿನಲ್ಲಿ ಕೆಡವಿ ತಾನು ಸಾಧಾಗಾಯ ನನ್ನ ಮಗ ಪ್ರಭುಗೌಡನಿಗೆ ಬಾರಿ ಗಾಯ ಪಡಿಸಿದ್ದು ಉಪಚಾರಕ್ಕೆ ಕರೆದುಕೊಂಡು ಹೋಗುವಾಗ ದಾರಿ ಮದ್ಯ ನನ್ನ ಮಗ ಪ್ರಭುಗೌಡ ಭೀಮನಗೌಡ ನಾಗರಾಳ @ ಬಿರಾದಾರ. ಇವನು ಮೃತನಾಗಿದ್ದು ಇರುತ್ತದೆ. ನಾನು ಮನೆಯಲ್ಲಿ ಘಟನೆಯ ಬಗ್ಗೆ ತಿಳಿಸಿ ಬಂದು ಪಿರ್ಯಾದಿ ನೀಡಲು ತಡವಾಗಿದ್ದು ಇರುತ್ತದೆ. ಸದರ ಕಾರ ಚಾಲಕನ ಮೇಲೆ ನನ್ನದು ಪಿರ್ಯಾದಿ ಇದ್ದು ಕಾನೂನು ಕ್ರಮ ಜರೂಗಿಸಲು ವಿನಂತಿ. ಅಂತಾ ವಗೈರ ಪಿರ್ಯಾದಿಯಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಭೀಮನಗೌಡ ಹಣಮಂತ್ರಾಯಗೌಡ ನಾಗರಾಳ @ ಬಿರಾದಾರ. ಸಾ॥ ಫತ್ತೇಪೂರ. ತಾ॥ ತಾಳಿಕೋಟಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 26.05.2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಿಕೋಟಾ ಪೊಲೀಸ್ ಠಾಣೆ ಗುನ್ನಾ. ನಂ: 72/2021 ಕಲಂ: 188, 269, 271 ಐಪಿಸಿ & 51(ಬಿ) ಡಿಎಮ್ಎ ಯಾಕ್ಟ 2005 ಮತ್ತು 87 ಕೆ.ಪಿ.ಆ್ಯಕ್ಟ**

ದಿನಾಂಕ: 26.05.2021 ರಂದು 17.10 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಶಾಮರಾಯ ಸಿದರಾಮ ಕುಮಟಗಿ 2) ಮಡ್ಡೆಪ್ಪಾ ವಿಠ್ಠಲ ಕುಮಟಗಿ 3] ರಾವಸಾಹೇಬ ಸಿದ್ದಪ್ಪಾ ಸೋಲಾಪುರ 4] ಬಸವರಾಜ ಪರಗೊಂಡ ಶೆಡಿಹಾಳ 5] ಮಲ್ಲಿಕಾರ್ಜುನ ಶ್ರೀಶೈಲ ಹಿರೆಮಠ 6] ಸಾಬು ನಿಂಗಪ್ಪ ಕಬ್ಬುರ 7] ಮಲ್ಲು ಮಾಹಾದೇವ ಮುಚ್ಚಂಡಿ 8] ಸಿದ್ದು ಲಕ್ಷ್ಮಣ ಕಲಬೀಳಗಿ 9] ರಾಜು ಸುರೇಶ ಮಂಟೂರ 10] ರವಿ ರಾಮಪ್ಪ ಸುತಾರ ಸಾ; ಎಲ್ಲರೂ ತಾಜಪೂರ (ಎಚ್) ಇವರು ಕೋರೊನಾ ಕೊವಿಡ –19 ರೋಗದ ಹರಡುವಿಕೆ ನಿಯಂತ್ರಿಸುವ ಸಲುವಾಗಿ ಸರ್ಕಾರವು ವಿಧಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿ ಸಾಂಕ್ರಾಮಿಕ ರೋಗವು ಹರಡದಂತೆ ಕೈಕೊಂಡ ಕ್ರಮಗಳ ವಿರುದ್ದವಾಗಿ ಸಾರ್ವಜನಿಕ ಪ್ರಾಣಕ್ಕೆ ಉದ್ದೇಶಪೂರ್ವಕವಾಗಿ ಸೋಂಕನ್ನು ಹರಡುವ ಸಂಭವ ಇದೆ ಎಂದು ಗೊತ್ತಿದ್ದರೂ ಕೂಡಾ ಅವರು ಉದ್ದೇಶ ಪೂರ್ವಕವಾಗಿ ಒಂದು ಕಡೆ ಗುಂಪು ಕೂಡಿ ಕುಳಿತು ಮತ್ತು ತಿರುಗಾಡಿ ಸಾಂಕ್ರಾಮಿಕ ರೋಗ ಹರಡಲು ಕಾರಣಿಭೂತರಾಗಿ ಸಾರ್ವಜನಿಕರ ಜೀವಕ್ಕೆ ರೋಗ ಹರಡುವ ಸಾಧ್ಯತೆ ಇದ್ದದ್ದು ಗೊತ್ತಿದ್ದರೂ ಕೂಡಾ ಸದರಿ ಆರೋಪಿತರು ತಮ್ಮ ತಮ್ಮ ಫಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣದ ಬೆಟ್ಟ ಕಟ್ಟಿ ಅಂದರ–ಬಾಹರ ಇಸ್ಪೆಟ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ: ತ: ಎಸ್ ಕೆ ಲಂಗೂಟಿ ಮ ಪಿಎಸ್ಐ ತಿಕೋಟಾ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 26.05.2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಚಡಚಣ ಪೊಲೀಸ್ ಠಾಣೆ ಗುನ್ನಾ. ನಂ: 46/2021 ಕಲಂ: 379 ಐಪಿಸಿ & ಕಲಂ: 31 [ಆರ್] &42 ಕೆ.ಎಂ.ಎಂ.ಸಿ.ಆರ್. ಆ್ಯಕ್ಟ – 1994**

ದಿನಾಂಕ: 26.05.2021 ರಂದು ನಸುಕಿನ: 06.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಪರಶುರಾಮ ಅಂಕುಶ ವಾಲೀಕಾರ ಸಾ॥ ದಸೂರ ತಾ॥ ಚಡಚಣ [ಮಹಿಂದ್ರಾ ಅರ್ಜುನ ಅಲ್ಟ್ರಾ1] 605–ಡಿಐ ಕಂಪನೀಯ ಟ್ರ್ಯಾಕ್ಟರ್ ನಂ: ಕೆ.ಎ:28 ಟಿ.ಎ:9311 [ಟ್ರ್ಯಾಕ್ಟರ್‌ದ ಎಸ್.ಆರ್.ನಂ:ಪಿ.ಎಂ.ಯು.3649–ಈ.ಎ] ನೇದ್ದರ ಚಾಲಕ] 2] ವಿಜಯಕುಮಾರ ಶಿವಾಜಿ ಪಾಟೀಲ ಸಾ॥ ದಸೂರ ತಾ॥ ಚಡಚಣ [ಮಹಿಂದ್ರಾ ಅರ್ಜುನ, 445–ಡಿಐ ಕಂಪನೀಯ, ನೊಂದಣಿ ನಂಬರ ನಮೂದು ಇಲ್ಲದ, [ಟ್ರ್ಯಾಕ್ಟರ್‌ದ ಎಸ್.ಆರ್ ನಂ: ಯು.ಎ.ಪಿ.309–ಕೆ.2] ಇರುವ ಹಾಗು ನೊಂದಣಿ ನಂಬರ ನಮೂದು ಇಲ್ಲದ ಟ್ರೈಲಿ ನೇದ್ದರ ಚಾಲಕ] ಇವರು ದಸೂರ ಗ್ರಾಮದ ಹದ್ದಿಯಲ್ಲಿ ಬರುವ ಭೀಮಾನದಿಯಲ್ಲಿ ಟ್ರ್ಯಾಕ್ಟರ್‌ಗಳಲ್ಲಿ ಅಕ್ರಮವಾಗಿ ಮರಳು ತುಂಬಿ ಹೊಸ ದಸೂರ ಗ್ರಾಮದ ಬಸ್ಸಸ್ಟ್ಯಾಂಡದ ಹತ್ತಿರ 1] ಮರಳು ಲೋಡ ಇರುವ ಮಹಿಂದ್ರಾ ಅರ್ಜುನ ಅಲ್ಟ್ರಾ1, 605–ಡಿಐ ಕಂಪನೀಯ ಟ್ರ್ಯಾಕ್ಟರ್ ನಂ: ಕೆ.ಎ:28/ಟಿ.ಎ:9311 [ಟ್ರ್ಯಾಕ್ಟರ್‌ದ ಎಸ್.ಆರ್.ನಂ:ಪಿ.ಎಂ.ಯು. 3649–ಈ.ಎ] ಹಾಗು ಇದಕ್ಕೆ ಅಟ್ಯಾಚ್ ಇರುವ ನೊಂದಣಿ ನಂಬರ ನಮೂದು ಇರದ ಟ್ರೈಲಿ ಹಾಗು ಇನ್ನೊಂದು 2] ಮರಳು ಲೋಡ ಇರುವ ಮಹಿಂದ್ರಾ ಅರ್ಜುನ, 445–ಡಿಐ ಕಂಪನೀಯ, ನೊಂದಣಿ ನಂಬರ ನಮೂದು ಇಲ್ಲದ, [ಟ್ರ್ಯಾಕ್ಟರ್‌ದ ಎಸ್.ಆರ್ ನಂ: ಯು.ಎ.ಪಿ.309–ಕೆ.2] ಇರುವ ಹಾಗು ನೊಂದಣಿ ನಂಬರ ನಮೂದು ಇಲ್ಲದ ಟ್ರೈಲಿ ಇವುಗಳು ಸಿಕ್ಕಿರುತ್ತವೆ, ಸದರ ಎರಡು ಟ್ರ್ಯಾಕ್ಟರ್ ಟ್ರೈಲಿಗಳಲ್ಲಿ ತಲಾ 01 ಬ್ರಾಸದಷ್ಟು [ಎರಡು ಸೇರಿ ಅಂದಾಜು: 02 ಬ್ರಾಸದಷ್ಟು] ಮರಳು ಲೋಡ ಇದ್ದು, [ಎರಡು ಟ್ರ್ಯಾಕ್ಟರ್‌ಗಳಲ್ಲಿನ ಮರಳು ಸೇರಿ ಅಂದಾಜು ಕಿಮ್ಮತ್ತು: 4000/– ರೂ] ಸದರ ಟ್ರ್ಯಾಕ್ಟರ್‌ಗಳಲ್ಲಿ ಲೋಡ ಇರುವ ಮರಳಿನ ಬಗ್ಗೆ ಆರೋಪಿತರ ಹತ್ತಿರ ಸರ್ಕಾರದಿಂದಾಗಲಿ ಅಥವಾ ಸಂಬಂಧಪಟ್ಟ ಇಲಾಖೆಯಿಂದಾಗಲಿ ಯಾವುದೆ ಲೈಸನ್ಸ್ ವ, ಪರವಾನಿಗೆ ಇಲ್ಲದೆ ಅದರ ಡ್ರೈವರ್‌ಗಳು ಕಳ್ಳತನದಿಂದಾ ದಸೂರ ಗ್ರಾಮದ ದಡದಲ್ಲಿರುವ ಭೀಮಾನದಿಯಲ್ಲಿಂದಾ ಮರಳು ತುಂಬಿಕೊಂಡು ಸಾಗಾಟ ಮಾಡುವಾಗ ಟ್ರ್ಯಾಕ್ಟರ್‌ಗಳ ಸಮೇತ ಸಿಕ್ಕ ಬಗ್ಗೆ ಫಿರ್ಯಾದದಲ್ಲಿ ನಮುದು ಇರುತ್ತದೆ. ಈ ಬಗ್ಗೆ ಸ:ತ: ಎಂ.ಎ.ಸತಿಗೌಡರ ಪಿಎಸ್ಐ ಚಡಚಣ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 26.05.2021 ರಂದು ಚಡಚಣ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.